ಹೇಳಬೇಕೋ ಅಂತ ಸಣ್ಣಗೆ ಬೆವರತೊಡಗಿದೆ. ಈಗ ಮಧ್ಯಾಹ್ನದ ನಿದ್ದೆಯ ಮೂಡು ಹೋಗಿ ರಾತ್ರಿಯೂ ಜಾಗರಣೆ ಕೂರಬೇಕಾದ ಪರಿಸ್ಥಿತಿ ಬಂದೊದಗುತ್ತದಲ್ಲ ಅಂತ ಚಿಂತಾಕ್ರಾಂತಳಾದೆ.

'ಅಯ್ಯೋ... ಅಯ್ಯೋ... ಹಂಗೇನಿಲ್ಲ ಸರ್... ಮಡಿಕೇರಿ ಇಲ್ಲಿಂದ ಎಷ್ಟು ದೂರ ಹೇಳಿ? ಬಸ್ಸ್ ಹತ್ತಿ ಒಂದು ಕೋಳಿ ನಿದ್ದೆ ತೆಗೆಯುವಷ್ಟರಲ್ಲಿ ಮಡಿಕೇರಿ... ಮಡಿಕೇರಿ... ಯಾರ್ರೀ ಅಲ್ಲಿ... ಅಂತ ಕಂಡಕ್ಟರ್ ಕಿರುಚೋಕು ಮುಂಚೆಯೇ ಎಚ್ಚರಾಗಿ ಬಸ್ಸು ನಿಂತಾಗಿರುತ್ತದೆ.'

'ಹ್ಮ್ಂ , ಮತ್ತೆಂತ ಸಮಸ್ಯೆ ನಿಮ್ಮದು?'

'ಆದರೆ, ಸಮಸ್ಯೆ ಅದಲ್ಲ ಸರ್. ನಾವು ಕೃಷಿಕರು, ಮನೆಯಿಂದ ಹೊರಡುವುದು ತೊಂದರೆ ಆಗ್ತದೆ. ದಿನಾ 4-5 ಜನ ಕೆಲಸಗಾರರು ಬರ್ತಾರೆ, ಅವರಿಗೆ ತಿಂಡಿ, ಮಧ್ಯಾಹ್ನದ ಅಡುಗೆ ಇವೆಲ್ಲ ಮಾಡಿ ಆಗುವಷ್ಟರಲ್ಲಿ ಹೊತ್ತಾಗಿ ಬಿಡುತ್ತೆ, ಹಾಗಾಗಿ ಬರಲಾಗದು' ಅಂತ ಎಷ್ಟು ಗೋಗೆರೆದರೂ ಅವರು ಕೇಳುವ ಸ್ಥಿತಿಯಲ್ಲಿ ಇಲ್ಲ.

'ನೀವು ಬರೆಯುವವರೇ ಹೀಗೆ ಬರುವುದಿಲ್ಲ ಅಂದರೆ ಉಳಿದವರು ಏನು ಮಾಡುವುದು? ನಿಮಗೂ ಒಂದು ಸಾಮಾಜಿಕ ಜವಾಬ್ದಾರಿ ಇರುತ್ತದೆ ಅಲ್ಲವಾ?'

ಮನೆ ಜವಾಬ್ದಾರಿ ನಿಭಾಯಿಸುವುದಕ್ಕೇ ಕಷ್ಟ ಪಡುತ್ತಿರುವಾಗ, ಇವರು ಸಾಮಾಜಿಕ ಜವಾಬ್ದಾರಿಯ ಮತ್ತೊಂದು ಹೊರೆಯನ್ನು ನನಗೆ ಹೊರೆಸುತ್ತಿದ್ದಾರಲ್ಲ? ನಾನೇನೋ ಆನು ಒಲಿದಂತೆ ಹಾಡುವೆನು ಅಂತ ಅಂಗಳ, ಆಕಾಶ, ಬೆಳದಿಂಗಳು, ನದಿ, ಮಣ್ಣು, ಮಸಿ ಅಂತ ಕವಿತೆ ಗೀಚಿಕೊಂಡು ನನ್ನದೇ ಲೋಕದಲ್ಲಿ ಅಂಗಳದ ನೆಲಗುಬ್ಬಿಯಂತೆ ಆಚೆಯಿಂದ ಈಚೆಗೆ, ಈಚೆಯಿಂದ ಆಚೆಗೆ ಕುಪ್ಪಳಿಸುತ್ತಾ ನಿಂತ ಜಾಗದಲ್ಲೇ ಪ್ರಪಂಚವನ್ನು ತುಂಬಿಕೊಳ್ಳುತ್ತಾ ದಿನವೊಂದನ್ನ ಆನಂದದಿಂದ ಕಳೆಯುವವಳು. ಇವರು ನೋಡಿದರೆ ಇಲ್ಲದ ಜವಾಬ್ದಾರಿಯನ್ನು ಹೊರೆಸಿ ನನ್ನ ಮಂಡೆಬಿಸಿ ಜಾಸ್ತಿ ಮಾಡುತ್ತಿದ್ದಾರೆ. ನಂಗೆ ಭಾಷಣ ಮಾಡುವುದಕ್ಕೆ ಬರುದಿಲ್ಲ... ಬರುದಿಲ್ಲ... ಎಷ್ಟು ಬಡಕೊಂಡು ಹೇಳಿದರೂ ಅವರು ಕೇಳುತ್ತಿಲ್ಲ. ನೀವು ಬರಲೇ ಬೇಕು, ಎಷ್ಟೆಲ್ಲ ಬರೀತೀರಿ... ಒಂದು ಹತ್ತು ನಿಮಿಷ ಮಾತಾಡೋಕೆ ಆಗುದಿಲ್ಲ ಅಂದ್ರೆ ಹೇಗೆ ಹೇಳಿ? ಇಷ್ಟು ಬರೆದೂ ಒಂದೆರಡು ಸಾಲು ಮಾತನಾಡಲು ಆಗುವುದಿಲ್ಲವೆಂದರೆ ಅದು ನಾಚಿಕೆಗೇಡು ಅನ್ನುವಂತಿತ್ತು ಅವರ ಮಾತಿನ ವರಸೆ.

'ಇಲ್ಲ ಸರ್, ನಾನು ಮನೆಯಿಂದ ಹೊರಗೆ ಹೋಗುವುದು ತೀರಾ ಕಡಿಮೆ' ಅಂತ ಮತ್ತೊಂದು ಸುಳ್ಳಿನ ಬಾಣ ಎಳೆದು ತಪ್ಪಿಸಿಕೊಳ್ಳಲು ನೋಡಿದರೆ, ಅವರೋ ಬತ್ತಳಿಕೆಯಿಂದ ಮತ್ತೊಂದು ಪ್ರತ್ಯಸ್ತ್ರವನ್ನು ಎಸೆದು ಮಣಿಸಲು ತಯಾರಾಗಿದ್ದಾರೆ.

'ಮೊನ್ನೆ ಫೇಸ್‌ಬುಕ್‌ನಲ್ಲಿ ನೋಡಿದ ಹಾಗಾಯ್ತು. ನೀವು ಹಾವೇರಿ ಸಮ್ಮೇಳನಕ್ಕೆ ಹೋಗಿ ಮೂರು ದಿನ ಇದ್ದು ಬಂದಿದ್ದೀರಿ. ಆಗ ಹೇಗೆ ಮನೆ, ತೋಟ, ಅಡುಗೆ ನಿಭಾಯಿಸಿದ್ರಿ? ನೀವು ಹಾವೇರಿಯಿಂದ ಊರಿಗೆ ಬಂದ ಮೇಲೂ ನಿಮ್ಮ ಆಸ್ತಿ ಪಾಸ್ತಿ ದನಕರು ಮನೆಮಠ ಎಲ್ಲ ಹಾಗೇ ಇತ್ತು ತಾನೇ? ಸುಮ್ಮಗೆ ಏನೆಲ್ಲ ನಿಮ್ಮ ಮೇಲೆ ಇಲ್ಲದ ಹೊರೆಯನ್ನು ಹೇರಿಕೊಳ್ಳಬೇಡಿ.' ನೀವು ಇಲ್ಲದಿದ್ದರೂ ಇದೆಲ್ಲ ನಡಿಯುತ್ತೆ ಅನ್ನುವಂತಿತ್ತು ಅವರ ಮಾತಿನ ದಾಟಿ. 'ನೋಡಿ ಮೇಡಂ, ಇಲ್ಲದ ಸಮಸ್ಯೆ ಎಳೆದು ಹಾಕಿ, ಸುಳ್ಳು ಪಳ್ಳು ಹೇಳಿ ನೀವು ತಪ್ಪಿಸಿಕೊಳ್ಳುವ ಹಾಗೇ ಇಲ್ಲ. ವೇದಿಕೆಲಿ ಅದಾಗಲೇ ನಾಲ್ಕು ಜನ ಅತಿಥಿಗಳು ಪುರುಷರು. ಒಬ್ಬರಾದರೂ ಮಹಿಳೆಯರು ಇರದಿದ್ದರೆ ಹೇಗೆ? ಮತ್ತೆ ಅದನ್ನೇ ದೊಡ್ಡದು ಮಾಡಿಕೊಂಡು ಬರೆಯುವವರೂ ನೀವೇ, ಕರೆದಾಗ ಬರುವುದಿಲ್ಲ ಹೇಳುವುದೂ ನೀವೇ. ಎಲ್ಲರೂ ನಿಮ್ಮ ಹೆಸರನ್ನೇ ಹೇಳಿದ್ದಾರೆ. ನಾವು ನಿಮ್ಮ ಹೆಸರನ್ನೇ ಫೈನಲ್ ಮಾಡಿದ್ದೇವೆ, ನೋಡಿ ನೀವು ಮನಸು ಮಾಡಿ, ಮಧ್ಯಾಹ್ನದ ಒಳಗೆ ಕಾರ್ಯಕ್ರಮ ಮುಗಿದು ಬಿಡುತ್ತದೆ, ನಿಮ್ಮ ಕೆಲಸಗಳಿಗೆ ಅಡ್ಡಿ ಬರುವುದಿಲ್ಲ ನಾವು.'

'ಸರ್, ವಿಷಯ ಅದಲ್ಲ... ನನಗೆ ಭಾಷಣ ಮಾಡಲು ಬರುವುದಿಲ್ಲ...' ಮತ್ತೊಮ್ಮೆ ಮೆತ್ತಗೆ ಹೇಳಿದೆ. ಅವರು ಅದನ್ನು ನಂಬುವ ಸ್ಥಿತಿಯಲ್ಲಿ ಇಲ್ಲ.

'ನೀವು ಸುಮ್ಮಗೆ ಏನೆಲ್ಲಾ ರಾಮಾಯಣ ಹೇಳುತ್ತಾ ನಾಟಕ ಮಾಡಬೇಡಿ. ಮೊನ್ನೆ ಬೆಂಗಳೂರಿಗೆ ಹೋಗಿ ಮಾತಾಡಿ ಬಂದ್ರಿ, ಹಾವೇರಿಗೆ ಹೋಗಿ ಮಾತಾಡಿ ಬಂದ್ರಿ, ಈಗ ಕೂಗಳತೆ ದೂರದ ಮಡಿಕೇರಿಗೆ ಬನ್ನಿ ಅಂದರೆ ನೂರೆಂಟು ವರಟು ವಾಯರ ಹೇಳ್ತೀರಲ್ರೀ... ಇರಲಿ ಬಿಡಿ, ನಿಮ್ಮ ಮನೆ ರೂಟ್ ಮ್ಯಾಪ್ ಹಾಕಿ, ನಾವು ಮನೆಗೆ ಬಂದೇ ನಿಮ್ಮನ್ನು ಕರೆಯುತ್ತೇವೆ. ನಂತರ ಎರಡು ದಿನ ಬಿಟ್ಟು ನಿಮ್ಮ ತೀರ್ಮಾನ ಹೇಳಿ